ಅಮ್ಮನನ್ನು ಸಾಕುತ್ತಿದ್ದಳು' ಎಂದು ಹೇಳುತ್ತಿದ್ದಂತೆ ದಾಸುಭಟ್ರು 'ಯಾವುದಾದರೂ ಹೌದು ರೇಬಿಸ್ ಕಾಯಿಲೆಯಿಂದ ಸಾಯಬಾರದು ಮಾರಾಯರೇ' ಎಂದರು. ಆ ಮೇಲೆ, 'ನಾನು ಅವಳನ್ನು ಖುದ್ದು ನೋಡಲು ಹೋಗಿದ್ದೆ. ಒಂದು ಕೋಣೆಯಲ್ಲಿ ಆಕೆಯನ್ನು ಕೂಡಿ ಹಾಕಿದ್ದರು. ಆಕೆ ನಾಯಿಯ ಹಾಗೆ ಚೀರುತ್ತಿದ್ದಳು. ವಿಪರೀತ ಬಾಯಾರಿಕೆ ಆಗುತ್ತಿರಬೇಕು ಆಕೆಗೆ. ಎದುರು ನೀರಿಟ್ಟಿದ್ದರು. ಆಕೆ ಅದನ್ನು ಎತ್ತಿ ಕುಡಿಯಲು ಹೊರಟರೆ ಅದು ಗಂಟಲಲ್ಲಿ ಇಳಿಯದೆ ಒದ್ದಾಡುವುದು ನೋಡಿ ನನಗೆ ಅಳು ಬಂದಿತ್ತು. ನಮ್ಮ ವೈರಿಗಳಿಗೂ ಇಂಥ ಕಾಯಿಲೆ ಬರಬಾರದು ನೋಡಿ' ಎನ್ನುತ್ತಾ ಭಾವುಕರಾದಂತೆ ಕಣ್ಣು ಒರಸಿಕೊಂಡರು.

ಕುಪ್ಪಣ್ಣಯ್ಯ 'ಹ್ಞೂ, ಗೊತ್ತು. ನನಗೂ ಆಕೆಯನ್ನು ನೋಡಬೇಕೆಂಬ ಆಸೆ ಇತ್ತು. ಆದರೆ ನೋಡಿ ಬಂದವರೆಲ್ಲ ಹೇಳಿದ್ದು ಕೇಳಿ, ನಾನು ಹೋಗದಿರಲು ನಿಶ್ಚಯಿಸಿದೆ' ಎಂದರು. ಆಮೇಲೆ 'ಈಗ ಏನು ಹೇಳಲು ಬಂದಿದ್ದೀರಿ ನೀವು?' ಎಂದು ದಾಸುಭಟ್ರು ಬಂದ ಉದ್ದೇಶದ ಬಗ್ಗೆ ಕುತೂಹಲ ತೋರಿಸಿದರು.

ದಾಸುಭಟ್ರು ತಗ್ಗಿದ ಸ್ವರದಲ್ಲಿ 'ನನಗೊಂದು ಸಣ್ಣ ಸಂಶಯ ಶುರುವಾಗಿದೆ ಮಾರಾಯರೇ. ನಮ್ಮ ಮನೆಯಲ್ಲಿ ಇದ್ದ ಒಂದು ಬೆಕ್ಕು ಇದ್ದಕ್ಕಿದ್ದ ಹಾಗೆ ಆ ಹೆಣ್ಮಗಳು ಸತ್ತ ದಿನದಿಂದ ಕಾಣೆಯಾಗಿದೆ. ಅದರ ಮೊದಲ ದಿನ ನಾನು ಅಕಸ್ಮಾತ್ ಅದನ್ನು ತುಳಿದಾಗ, ಅದು ಕಾಲಿಗೆ ಕಚ್ಚಿತ್ತು. ಕೂಡಲೇ ಹೆಗಲಲ್ಲಿದ್ದ ಶಲ್ಯ ತೆಗೆದು ಬೀಸಿ ಅದಕ್ಕೆ ಹೊಡೆದೆ. ಅದು ಓಡಿ ಹೋಯಿತು. ಆಮೇಲೆ ನಾಲ್ಕು ದಿನವಾದರೂ ಅದು ಬಂದಿಲ್ಲ. ನನಗೆ ಈಗ ಅದಕ್ಕೆ ರೇಬಿಸ್ ಇದ್ದೇ ಕಚ್ಚಿರಬಹುದೇ? ಎಂಬ ಸಂಶಯ ಪ್ರಾರಂಭವಾಗಿದೆ. ಹಾಗಾಗಿ ನಾನು ಆ್ಯಂಟಿ ರೇಬಿಸ್ ಇಂಜೆಕ್ಷನ್ ತಗೊಳ್ಳಬೇಕಲ್ಲ? ಅದಕ್ಕೆ ನಿಮ್ಮ ಅನುಭವ ಬೇಕು!' ಎಂದರು.

ಕುಪ್ಪಣ್ಣಯ್ಯ ಒಂದು ನಿಮಿಷ ಸುಮ್ಮನಿದ್ದು, 'ನೀವು ನನ್ನನ್ನು ಕೇಳುವ ಬದಲು ನಮ್ಮ ಧರ್ಮಾಸ್ಪತ್ರೆಯ ಡಾಕ್ಟ್ರನ್ನು ನೋಡಬೇಕಿತ್ತು. ಒಂದು ಟಿ.ಟಿ.ಇಂಜೆಕ್ಷನ್ ತೆಗೆದುಕೊಳ್ಳಬೇಕಾಗಿತ್ತು ಮೊದಲು' ಎಂದರು ತುಸು ಆತಂಕದಲ್ಲಿ.

ದಾಸುಭಟ್ರು 'ಅದೆಲ್ಲ ಆಗಿದೆ ಮಾರಾಯರೇ. ಈಗ ನಾನು ಏನು ಪ್ರಶ್ನೆ ನಿಮ್ಮಲ್ಲಿ ಎತ್ತಿದೆನೋ ಅದನ್ನು ಅವರಲ್ಲೂ ಎತ್ತಿದ್ದೆ. ಆಗ ಅವರು 'ನಿಮ್ಮ ಬೆಕ್ಕಿಗೆ ರೇಬಿಸ್ ಕಾಯಿಲೆ ಬಂದಿರಲಿಕ್ಕಿಲ್ಲ. ಆಕಸ್ಮಿಕವಾಗಿ ಕಡಿದಿರಬಹುದು. ಯಾವುದೇ ರೇಬಿಸ್ ಪೀಡಿತ ಪ್ರಾಣಿ ಹದಿನೈದು ದಿನಕ್ಕಿಂತ ಹೆಚ್ಚು ಬದುಕುವುದಿಲ್ಲ. ಅದನ್ನು ನೀವು ಎಚ್ಚರದಿಂದ ನೋಡಬೇಕು. ಎರಡು ದಿನಗಳ ಒಳಗೆ ನಿಮ್ಮ ಬೆಕ್ಕು ಮರಳಿ ಬರಬಹುದು. ಬಾರದಿದ್ದರೆ ಅದಕ್ಕೆ ರೇಬಿಸ್ ಆಗಿತ್ತು ಇಲ್ಲವೋ ಎಂದು ನಾನು ಹೇಳಲಾರೆ. ನೀವು ರಾಂಪುರಕ್ಕೆ ಹೋಗಿ ವೆಟರ್ನರಿ ಡಾಕ್ಟ್ರನ್ನು ನೋಡಿ' ಎಂದರು. ಹಾಗಾಗಿ ನಾನು ಅಲ್ಲಿಗೆ ಹೋದೆ. ವೆಟರ್ನರಿ ಡಾಕ್ಟ್ರು ಹದಿನೈದು ದಿನಗಳ ರಜೆ ಹಾಕಿ ಊರಿಗೆ ಹೋಗಿದ್ದಾರಂತೆ. ಅವರ ತಾಯಿ ನಿಧನರಾಗಿದ್ದಾರೆ ಎಂಬಂತೆ ಕಂಪೌಂಡರ್ ಹೇಳಿದ. ಅಷ್ಟರ ತನಕ ನಾನು ಕಾಯುವುದು ಹೇಗೆ ಎಂದು ಹೊಳೆಯುವುದಿಲ್ಲ. ನಮ್ಮ ಆಸ್ಪತ್ರೆಯ ಡಾಕ್ಟ್ರು 'ನಮ್ಮಲ್ಲಿ ಆ್ಯಂಟಿ ರೇಬೀಸ್ ಇಂಜೆಕ್ಷನ್ ಇಲ್ಲ' ಎನ್ನುತ್ತಿದ್ದಾರೆ. 'ಹೊರಗಿನಿಂದ ತಂದರೆ ಕೊಡುತ್ತೀರಾ?' ಎಂದು ಕೇಳಿದೆ. 'ಕೊಡುತ್ತೇನೆ, ಆದರೆ ಅದು ರೇಬೀಸ್ ಸೋಂಕು ಉಳ್ಳ ಪ್ರಾಣಿಯ ಬೈಟ್ ಆದರೆ ಮಾತ್ರ ಅನಿವಾರ್ಯ. ಇಲ್ಲವಾದರೆ, ಅದು ಒಳ್ಳೆಯದಲ್ಲ' ಎಂದಿದ್ದರು?' ಎಂದರು.

'ಹೌದು ನಮ್ಮ ಡಾಕ್ಟ್ರು ಸರಿಯಾಗಿ ಹೇಳಿದ್ದಾರೆ' ಎಂದ ಕುಪ್ಪಣ್ಣಯ್ಯ 'ನಾನು ರಾತ್ರಿ ಮನೆಗೆ ಹೋಗುವುದು ಆ ಡಾಕ್ಟ್ರ ಕ್ವಾರ್ಟ್ರಸ್‌ನ ಇದಿರು. ಅವರಲ್ಲಿ ಮಾತನಾಡಿ ನಾಳೆ ನಿಮಗೆ ತಿಳಿಸುತ್ತೇನೆ' ಎಂದರು.

ಇಬ್ಬರಲ್ಲೂ ಲೋಕಾಭಿರಾಮದ ಮಾತುಕತೆಗಳಾದವು. ದಾಸುಭಟ್ರು, 'ಡಾಕ್ಟ್ರಲ್ಲಿ ಕೇಳಿ ಮತ್ತೆ, ಕೇಳಿ ಮತ್ತೆ' ಎಂದು ಎರಡೆರಡು ಬಾರಿ ಕುಪ್ಪಣ್ಣಯ್ಯನವರನ್ನು ಎಚ್ಚರಿಸಿ, ಮನೆಯಾಚೆ ಹೆಜ್ಜೆ ಹಾಕಿದರು.

ಸೀತಾಪುರದ ಪಿ.ಎಚ್.ಸಿ.ಯ ವೈದ್ಯಾಧಿಕಾರಿ ಡಾ. ರಾಯಪ್ಪನವರು ಕುಪ್ಪಣ್ಣಯ್ಯನ ಜೊತೆ ಹೆಚ್ಚು ಹೊಕ್ಕು ಬಳಕೆ ಉಳ್ಳವರು. ಅವರು ತೀರ್ಥಹಳ್ಳಿಯಿಂದ ವರ್ಗವಾಗಿ ಸೀತಾಪುರದ ಪಿ.ಎಚ್.ಸಿಗೆ ಬಂದಾಗ ಒಬ್ಬರೇ ಬಂದಿದ್ದರು. ಅವರ ಹೆಂಡತಿ 'ಹೆರಿಗೆಯಾಗಿ ತಿಂಗಳಾಗಿತ್ತಷ್ಟೇ' ಎಂದು ಅವರು ಸಂಸಾರವನ್ನು ತೀರ್ಥಹಳ್ಳಿಯಲ್ಲೇ ಬಿಟ್ಟು ಬಂದಿದ್ದರು. ಆ ದಿನಗಳಲ್ಲಿ ಕುಪ್ಪಣ್ಣಯ್ಯನವರು ತಮ್ಮ ಹೋಟೆಲಿನಿಂದಲೇ